ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
● VIJAYAVANI » MYSURU
ಬುಧವಾರ 15 ಜೂನ್ 2022
15 JUNE 2022

ಮೈಸೂರು ಲೋಕಲ್ ಎಕ್ಸ್‌ಪ್ರೆಸ್

ರಾಜ್ಯದ ಪ್ರಮುಖ ಜಲಾಶಯಗಳ 14-06-2022 ನೀರಿನ ಮಟ್ಟ

ಒಳ ಹರಿವು-ಹೊರ ಹರಿವು ಕ್ಯೂಸೆಕ್‌ಗಳಲ್ಲಿ

ಜಲಾಶಯ	ಇಂದಿನಮಟ್ಟ	ಗರಿಷ್ಠ	ಒಳ-ಹೊರಹರಿವು
ಆಲಮಟ್ಟಿ	513.24	519.60 ಮೀ.	1735-450
ಬಸವಸಾಗರ	490.76	492.25 ಮೀ.	1019-865
ತುಂಗಭದ್ರಾ	1612.59	1633 ಅಡಿ	1410-296
ಲಿಂಗನಮಕ್ಕಿ	1750.40	1819 ಅಡಿ	00-4198
ಭದ್ರಾ	150.8	186 ಅಡಿ	313-128
ಘಟಪ್ರಭಾ	2096	2175 ಅಡಿ	00-116
ಮಲಪ್ರಭಾ	2052.89	2079.50 ಅಡಿ	00-194
ಕೆಆರ್‌ಎಸ್	105.55	124.80 ಅಡಿ	1425-1143
ಕಬಿನಿ	2261.12	2284 ಅಡಿ	1400-1000
ಹಾರಂಗಿ	2851.10	2859 ಅಡಿ	352-50
ಹೇಮಾವತಿ	2905.15	2922 ಅಡಿ	496-200

ಹವಾಮಾನ

ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

ಜಿಲ್ಲೆ	ಕನಿಷ್ಠ	ಗರಿಷ್ಠ
ಶಿವಮೊಗ್ಗ	22.0	32.0
ಬಳ್ಳಾರಿ	24.0	35.0
ಬೆಳಗಾವಿ	21.0	26.0
ಮೈಸೂರು	21.0	32.0
ಹುಬ್ಬಳ್ಳಿ	21.0	29.5
ಕಲಬುರಗಿ	24.4	36.8
ವಿಜಯಪುರ	21.6	33.5
ಮಂಗಳೂರು	22.5	30.2
ಚಿತ್ರದುರ್ಗ	21.1	31.5
ಬೆಂಗಳೂರು	20.6	29.5
ರಾಯಚೂರು	23	33

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್ ಅಭಿಮತ

ಮಕ್ಕಳಿಗೆ ಶಿಕ್ಷಣ ನೀಡುವುದು ಸರ್ಕಾರದ ಹೊಣೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

14 ವರ್ಷದೊಳಗಿನ ಮಕ್ಕಳನ್ನು ವಿವಿಧ ಕಾರ್ಯಗಳಲ್ಲಿ ತೊಡಗಿಸುವುದು ಹಾಗೂ ಯಾವುದೇ ಸಂಸ್ಥೆಗಳಲ್ಲಿ ಕಾರ್ಮಿಕರನ್ನಾಗಿ ಬಳಸಿಕೊಳ್ಳುವುದು ಕಾನೂನು ರೀತಿಯಲ್ಲಿ ಅಪರಾಧವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಲ್. ರಘುನಾಥ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸ್ವಯಂ ಸೇವಾ ಸಂಘಗಳು ಹಾಗೂ ಮಕ್ಕಳ ಸಹಾಯವಾಣಿ 1098 ಸಹಯೋಗದೊಂದಿಗೆ ನಗರದ ಕಲಾಮಂದಿರದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಬಾಲ ಕಾರ್ಮಿಕ ಪದ್ಧತಿ ಈಗಿನ ಸಮಸ್ಯೆಯಲ್ಲ. ಯುಗಗಳಿಂದ ಇರುವ ಸಮಸ್ಯೆ. ಇದು ಮಕ್ಕಳನ್ನು ಶೋಷಣೆಗೆ ಒಳಪಡಿಸುವಂತಹ ಕ್ರಿಯೆಯಾಗಿದೆ ಎಂದರು.

ಶಿಕ್ಷಣ ಎಂಬುದು ಮೊದಲು ಮೂಲಭೂತ ಹಕ್ಕುಗಳ ಅಡಿಯಲ್ಲಿ ಇರಲಿಲ್ಲ. ಆದರೆ, ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡುವಂಥದ್ದು ರಾಜ್ಯ, ಕೇಂದ್ರ ಸರ್ಕಾರಗಳ ಹೊಣೆ ಎಂದು ತಿಳಿಸಿದರು. ಉಚಿತ ಶಿಕ್ಷಣ ನೀಡಲು ವ್ಯವಸ್ಥೆ ಮಾಡಿಕೊಂಡಿದ್ದರೂ ಇಂದಿಗೂ ಸಾಕಷ್ಟು ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದಾರೆ. ವಿಶೇಷವಾಗಿ ಬುಡಕಟ್ಟು ಮಕ್ಕಳು ಶಾಲೆಗೆ ಹೋಗಲ್ಲ. ಈ ಹಿನ್ನೆಲೆಯಲ್ಲಿ ಎಚ್.ಡಿ.ಕೋಟೆ ತಾಲೂಕಿನ ನಾಗರಹೊಳೆ ಹಾಗೂ ಕಾಕನಕೋಟೆಯ ಸಾಕಷ್ಟು ಹಳ್ಳಿಗಳಲ್ಲಿ ವಿದ್ಯಾರ್ಥಿಗಳಿಗೆ ಪುನರ್ವಸತಿ ಕೇಂದ್ರ ಸ್ಥಾಪನೆ ಮಾಡಿ ಮುಖ್ಯವಾಹಿನಿಗೆ ತರುವಂತಹ ಕೆಲಸನ್ನು ಮಾಡಲಾಗಿದೆ ಎಂದು ಹೇಳಿದರು. ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರದ ಸದಸ್ಯ ಕಾರ್ಯ ದರ್ಶಿ ದೇವರಾಜ ಭೂತೆ ಮಾತನಾಡಿದರು. ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯ ಸುಲ್ತಾನ, ಡಿಡಿಪಿಐ ರಾಮಚಂದ್ರರಾಜೇ ಅರಸ್, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ನಿರ್ದೇಶಕಿ ಸರಸ್ವತಿ, ಸಾಹಿತಿ ಬನ್ನೂರು ಕೆ.ರಾಜು, ಜ್ಞಾನ ಜ್ಯೋತಿ ಸಂಸ್ಥೆಯ ಸಂಸ್ಥಾಪನಾ ಕಾರ್ಯದರ್ಶಿ ಎಂ.ಎಸ್.ಹೇಮವತಿ ಇದ್ದರು.

ವಿಜಯವಾಣಿ ಚಿತ್ರ

ಕಲಾಮಂದಿರದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ನ್ಯಾಯಾಧೀಶ ಎಂ.ಎಲ್.ರಘುನಾಥ್ ಉದ್ಘಾಟಿಸಿದರು. ದೇವರಾಜ ಭೂತೆ, ನಾಜಿಯ ಸುಲ್ತಾನ, ರಾಮಚಂದ್ರ ರಾಜೇ ಅರಸ್, ಸರಸ್ವತಿ ಇನ್ನಿತರರು ಇದ್ದರು.

ನಂ.1 ಕನ್ನಡದ ನಂ.1 ದಿನಪತ್ರಿಕೆ
ವಿಜಯವಾಣಿ
ವಿಜಯವಾಣಿ ಫೋನ್ ಇನ್
ಕೌಶಲ ತರಬೇತಿ ಯಾರಿಗೆ? ಎಸ್‌ಎಸ್‌ಎಲ್‌ಸಿ, ಪಿಯುಸಿ ಬಳಿಕ ಯಾವುದಿದೆ ಮಾರ್ಗ?
ಸ್ಥಳೀಯ ಸಂಸ್ಥೆಗಳು, ಗ್ರಾ.ಪಂ.ನಿಂದ ದೊರೆಯುವ ಯೋಜನೆಗಳೇನು?
ಸ್ತ್ರೀಶಕ್ತಿ ಸಂಘಗಳಿಗೆ, ಸ್ವಾವಲಂಬನೆ ಬಯಸುವವರಿಗೆ ಇರುವ ಸೌಲಭ್ಯಗಳೇನು?
ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
ನಿಮ್ಮೆಲ್ಲ ಪ್ರಶ್ನೆಗಳಿಗೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಉತ್ತರ ನೀಡಲಿದ್ದಾರೆ
ಕರೆ ಮಾಡಿ ಮಾಹಿತಿ ಪಡೆದುಕೊಳ್ಳಿ
0821-2333001
ದಿನಾಂಕ: 18-06-2022 ಶನಿವಾರ
ಸಮಯ: ಬೆಳಗ್ಗೆ 11 ರಿಂದ 12ರ ವರೆಗೆ
ಸಿ.ಜಗನ್ನಾಥ
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಮೈಸೂರು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಸೋನಿಯಾಗಾಂಧಿ ಮೆಚ್ಚಿಸಲು ಕಾಂಗ್ರೆಸ್ ಪ್ರತಿಭಟನೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಸೋನಿಯಾಗಾಂಧಿ ಹಾಗೂ ರಾಹುಲ್‌ಗಾಂಧಿ ಅವರನ್ನು ಮೆಚ್ಚಿಸುವ ಸಲುವಾಗಿ ಕಾಂಗ್ರೆಸ್ ನಾಯಕರು ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ವ್ಯಂಗ್ಯವಾಡಿದರು.

ನಗರದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಪ್ರತಿಭಟನೆ ಮಾಡುವುದು ಎಲ್ಲರ ಹಕ್ಕು. ಆದರೆ, ಈ ವಿಚಾರವಾಗಿ ಕಾಂಗ್ರೆಸ್ ದೇಶಾದ್ಯಂತ ಪ್ರತಿಭಟನೆ ನಡೆಸುವ ಅವಶ್ಯಕತೆ ಇರಲಿಲ್ಲ. ಕಾಂಗ್ರೆಸ್ ನಾಯಕರನ್ನು ಮೆಚ್ಚಿಸುವ ಉದ್ದೇಶದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಜಾರಿ ನಿರ್ದೇಶನಾಲಯ (ಇಡಿ) ತನಿಖೆಗೆ ಒಳಪಡುವವರು ಆತಂಕಪಡುವ ಅವಶ್ಯಕತೆ ಇಲ್ಲ. ಪ್ರಾಮಾಣಿಕವಾಗಿದ್ದರೆ ಭಯ ಏತಕ್ಕೆ ಎಂದು ಪ್ರಶ್ನಿಸಿದರು. ಯಾರು ಅಕ್ರಮ ಮಾಡಿರುತ್ತಾರೋ ಅವರಿಗೆ ಭಯ ಇರುತ್ತದೆ. ಇ.ಡಿ. ರಾಜಕೀಯ ಪ್ರೇರಿತವಾಗಿ ತನಿಖೆ ನಡೆಸುವುದಿಲ್ಲ. ಇ.ಡಿ. ಹೊಸದಾಗಿ ರಚನೆಯಾಗಿದ್ದಲ್ಲ, ಹಲವು ವರ್ಷಗಳ ಹಿಂದೆಯೇ ರಚನೆಯಾಗಿದೆ. ರಾಜ್ಯದಲ್ಲೂ ಅನೇಕ ರಾಜಕಾರಣಿಗಳು, ಅಧಿಕಾರಿಗಳ ಮೇಲೆ ವಿಚಾರಣೆ ನಡೆದಿದೆ. ಆದರೆ, ತನಿಖೆ ವಿರುದ್ಧವಾಗಿ ಪ್ರತಿಭಟನೆ ಮಾಡುವುದು ಸರಿಯಲ್ಲ. ಇವರು ಪ್ರತಿಭಟನೆ ಮಾಡುತ್ತಿರುವುದನ್ನು ನೋಡಿದರೆ ಅವ್ಯವಹಾರ ನಡೆದಿರುವ ಅನುಮಾನ ಕಾಡುತ್ತಿದೆ ಎಂದರು.

» ಸಚಿವ ಎಸ್.ಟಿ. ಸೋಮಶೇಖರ್ ಟೀಕೆ

ಯುವ ಸಮೂಹಕ್ಕೆ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಎಂ.ಎಲ್.ರಘುನಾಥ್ ಸಲಹೆ

ರಕ್ತದಾನ ಮಾಡಿ ಜೀವ ಉಳಿಸಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ವಿಶ್ವ ರಕ್ತದಾನಿಗಳ ದಿನದ ಹಿನ್ನೆಲೆಯಲ್ಲಿ ಮಂಗಳವಾರ ನಗರದ ವಿವಿಧೆಡೆ ಸಂಘ ಸಂಸ್ಥೆಗಳ ನೂರಾರು ಜನರು ರಕ್ತದಾನ ಮಾಡುವ ಮೂಲಕ ಇನ್ನೊಬ್ಬರ ಜೀವ ಉಳಿಸಲು ನೆರವಾದರು.

ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಕಾಲೇಜಿನಲ್ಲಿ ಭಾರತೀಯ ರೆಡ್‌ಕ್ರಾಸ್ ಸೊಸೈಟಿ ವತಿಯಿಂದ ನಡೆದ ರಕ್ತದಾನ ಶಿಬಿರದಲ್ಲಿ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡು ರಕ್ತದಾನ ಮಾಡಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಎಂ.ಎಲ್.ರಘುನಾಥ್, ಯುವ ಸಮುದಾಯ ರಕ್ತದಾನ ಮಾಡುವ ಮೂಲಕ ಜನರ ಜೀವ ಉಳಿಸಬೇಕು. ಎನ್‌ಸಿಸಿ, ಎನ್‌ಎಸ್‌ಎಸ್ ಚಟುವಟಿಕೆಗಳು ಸಾಮಾಜಿಕ ಜವಾಬ್ದಾರಿ ತಿಳಿಸಿಕೊಡುತ್ತವೆ. ನೂರಾರು ಕೆಡೆಟ್‌ಗಳು ರಕ್ತ ಸಂಗ್ರಹ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯ ಎಂದರು.

ಕೆ.ಆರ್.ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಡಾ.ಬಿ.ಎಸ್.ಮಂಜುನಾಥ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಅನಿಮಿಯಾ ಮಹಿಳೆಯರನ್ನು ಕಾಡುತ್ತಿದೆ. ಜೀವನಶೈಲಿ, ಆಹಾರ ಕ್ರಮದ ಬದಲಾವಣೆ ದೇಹದಲ್ಲಿ ರಕ್ತದ ಕೊರತೆಗೆ ಕಾರಣವಾಗಿದೆ. ಗರ್ಭಿಣಿಯರು, ಕ್ಯಾನ್ಸರ್ ಸೇರಿದಂತೆ ವಿವಿಧ ರೋಗ ಪೀಡಿತರಿಗೆ ಹಾಗೂ ಶಸ್ತ್ರಚಿಕಿತ್ಸೆಗೆ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ರಕ್ತದಾನ ಸೇರಿದಂತೆ ಯಾವುದೇ ಮಾದರಿಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಿದಾಗ ಉಂಟಾಗುವ ಸಂತೃಪ್ತಿ ಹಲವು ಸಾಧನೆಗಳಿಗೆ ಕಾರಣವಾಗುತ್ತದೆ ಎಂದು ತಿಳಿಸಿದರು.

ಕೆ.ಆರ್.ಆಸ್ಪತ್ರೆಯ ರಕ್ತನಿಧಿ ಕೇಂದ್ರದಲ್ಲಿ ವರ್ಷಕ್ಕೆ 16 ಸಾವಿರ ಯೂನಿಟ್ ರಕ್ತ ಸಂಗ್ರಹದ ಗುರಿ ಇಟ್ಟುಕೊಳ್ಳಲಾಗಿದೆ. ನಿತ್ಯ 60 ಯೂನಿಟ್ ರಕ್ತ ಸಂಗ್ರಹವಾಗುತ್ತಿದೆ. ಇದಕ್ಕೆ ಯುವಕರ ಉತ್ಸಾಹ ಹಾಗೂ ಸಾಮಾಜಿಕ ಬದ್ಧತೆಯೇ ಕಾರಣ ಎಂದು ಶ್ಲಾಘಿಸಿದರು. ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್.ಚಂದ್ರಶೇಖರ್, ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಕಾರ್ಯದರ್ಶಿ ಡಾ.ಎಂ.ಎಸ್.ಜಯಂತ್, ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ದೇವಿಕಾ ಇದ್ದರು.

85 ವಿದ್ಯಾರ್ಥಿಗಳಿಂದ ರಕ್ತದಾನ: ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಹಾಗೂ ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ವಿಶ್ವವಿದ್ಯಾಲಯ ಆವರಣದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ 85 ಯುವಕ ಯುವತಿಯರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಆರ್.ಶಿವಪ್ಪ, ಸ್ಕೂಲ್ ಆಫ್ ಪ್ಲಾನಿಂಗ್ ಆ್ಯಂಡ್ ಆರ್ಕಿಟೆಕ್ಚರ್ ನಿರ್ದೇಶಕ ಪ್ರೊ.ಶಂಕರ್, ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಕೃತಿಕಾ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪ್ರೊ.ಪ್ರಮೋದ್ ಎಂ.ಗವಾರಿ ಇನ್ನಿತರರು ಇದ್ದರು.

ವಿಜಯವಾಣಿ ಚಿತ್ರ

ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಸಯ್ಯಾಜಿರಾವ್ ರಸ್ತೆಯ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಹೆಚ್ಚು ಬಾರಿ ರಕ್ತ ದಾನ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು. ಡಾ.ಪ್ರಸಾದ್, ಡಾ.ಮಂಜುನಾಥ್, ಡಾ.ಸಿರಾಜ್ ಅಹ್ಮದ್ , ಗಿರೀಶ್ ಹಾಗೂ ಮುತ್ತಣ್ಣ ಇತರರಿದ್ದರು.

ವಿಜಯವಾಣಿ ಚಿತ್ರ

ನಗರದ ಶಾರದಾವಿಲಾಸ ಕಾಲೇಜಿನಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಕಾಲೇಜಿನ ಎನ್‌ಸಿಸಿ ಕೆಡೆಟ್ ರಕ್ತದಾನ ಮಾಡಿದರು. ಶಾರದಾವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಕೆ.ಆರ್.ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಡಾ.ಬಿ.ಎಸ್.ಮಂಜುನಾಥ್, ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಎಂ.ಎಲ್.ರಘುನಾಥ್ ಇತರರಿದ್ದರು.

ಎಲ್ಲ ವಾರ್ಡ್‌ಗಳಲ್ಲಿ ಶಿಬಿರ ಆಯೋಜಿಸಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ರಕ್ತ ಕೇಂದ್ರ ವಿಭಾಗ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಮತ್ತು ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್, ಎನ್‌ಎಸ್‌ಎಸ್ ಘಟಕ ವತಿಯಿಂದ ಮಂಗಳವಾರ ಜೆಎಸ್‌ಎಸ್ ಆಸ್ಪತ್ರೆಯ ಶ್ರೀರಾಜೇಂದ್ರ ಶತಮಾನೋತ್ಸವ ಸಂಭಾಗಣದಲ್ಲಿ ವಿಶ್ವ ರಕ್ತದಾನಿಗಳ ದಿನ ಆಚರಿಸಲಾಯಿತು.

ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಪ್ರತಿದಿನ ಕ್ಯಾಲೆಂಡರ್‌ನಲ್ಲಿ ಒಂದೊಂದು ದಿನವಿದೆ. ಅದರಲ್ಲಿ ಪ್ರಮುಖವಾದ ದಿನ ರಕ್ತದಾನ ದಿನ. ಪಾಲಿಕೆ ವ್ಯಾಪ್ತಿಯ ಎಲ್ಲ ವಾರ್ಡ್‌ಗಳಲ್ಲೂ ಜೆಎಸ್‌ಎಸ್ ಆಸ್ಪತ್ರೆ ಮತ್ತು ಮೈಸೂರು ಮಹಾನಗರ ಪಾಲಿಕೆ ಸಹಯೋಗದೊಂದಿಗೆ ರಕ್ತದಾನ ಶಿಬಿರ ಆಯೋಜಿಸಬೇಕು. ಇದಕ್ಕೆ ಅಗತ್ಯ ಸಹಾಯ ಮತ್ತು ಸಹಕಾರ ನೀಡುವುದಾಗಿ ತಿಳಿಸಿದರು. ಜೆಎಸ್‌ಎಸ್ ಆಸ್ಪತ್ರೆಯ ರಕ್ತ ಕೇಂದ್ರ ಅಧಿಕಾರಿ ಡಾ.ಪಿ.ಪಲ್ಲವಿ, ರಕ್ತದಾನವು ಒಗ್ಗಟಿನ ಕ್ರಿಯೆಯಾಗಿದೆ. ಪ್ರತಿಯೊಬ್ಬರೂ ರಕ್ತದಾನ ಪ್ರಯತ್ನಕ್ಕೆ ಕೈ ಜೋಡಿಸಿ ಮತ್ತು ಜೀವ ಉಳಿಸಿ ಎಂದರು.

ಆಸ್ಪತ್ರೆಯ ನಿರ್ದೇಶಕ ಡಾ.(ಕರ್ನಲ್) ಎಂ.ದಯಾನಂದ ಮಾತನಾಡಿ, ರಕ್ತದಾನ ಬಹಳ ಮಹತ್ವವಾದದ್ದು. ಸೈನ್ಯದಲ್ಲಿ ನಾವು ಸೇವೆ ಸಲ್ಲಿಸುತ್ತಿದ್ದಾಗ ಯುದ್ಧ ಸಂದರ್ಭದಲ್ಲಿ ಸೈನಿಕರಿಗೆ ರಕ್ತದ ಅವಶ್ಯಕತೆ ಎದುರಾದ ಸಂದರ್ಭದಲ್ಲಿ ಅನುಭವಿಸಿದ ಕಷ್ಟಗಳನ್ನು ತಿಳಿಸಿದರು.

ಇದೇ ವೇಳೆ ನಿರಂತರವಾಗಿ ಸುಮಾರು 50ಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿರುವ ಗಿರೀಶ್ ಮೊದಲಿಯಾರ್, ಯೋಗೀಶ್ ಮತ್ತು ಫಣಿದತ್ತ ಅವರನ್ನು ಸನ್ಮಾನಿಸಲಾಯಿತು. ವಿಶ್ವ ರಕ್ತದಾನಿಗಳ ದಿನಾಚರಣೆಯಂದು ಸ್ವಯಂಪ್ರೇರಿತರಾಗಿ 120 ದಾನಿಗಳು ರಕ್ತದಾನ ಮಾಡಿದರು. ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ.ಎಚ್. ಬಸವನಗೌಡ, ಜೆಎಸ್‌ಎಸ್ ಆಸ್ಪತ್ರೆ ಉಪ ನಿರ್ದೇಶಕ ಡಾ. ಮಂಜುನಾಥ್, ಇಎಸ್‌ಐ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ವರದರಾಜು ಇತರರಿದ್ದರು.

» ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ನಿರ್ದೇಶನ

ಜಾಗೃತಿ ಅಭಿಯಾನಕ್ಕೆ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಚಾಲನೆ

ಬೋಗಾದಿಯ ಚಾಮುಂಡೇಶ್ವರಿ ಯುವ ಬಳಗ ಚಾಮುಂಡಿ ಬೆಟ್ಟದ ಪಾದದಲ್ಲಿ ಆಯೋಜಿಸಿದ್ದ ರಕ್ತದಾನ ಜಾಗೃತಿ ಅಭಿಯಾನಕ್ಕೆ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ರವಿ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ರಕ್ತವನ್ನು ಉತ್ಪತ್ತಿ ಮಾಡಲು ಸಾಧ್ಯವಿಲ್ಲ. ನಾಗರಿಕರು, ವಿದ್ಯಾರ್ಥಿಗಳು ರಕ್ತದಾನ ಮಾಡುವ ಮೂಲಕ ಸಾಮಾಜಿಕ ಬದ್ಧತೆ ಪ್ರದರ್ಶಿಸಬೇಕು. ನೂರಾರು ಜೀವಗಳನ್ನು ಉಳಿಸಬೇಕು ಎಂದು ಸಲಹೆ ನೀಡಿದರು. ಘೋಷಣಾ ಫಲಕಗಳನ್ನು ಪ್ರದರ್ಶಿಸಿ ಹಾಗೂ ಕರಪತ್ರಗಳನ್ನು ಹಂಚುವ ಮೂಲಕ ವಾಯು ವಿಹಾರಿಗಳು, ನಾಗರಿಕರಲ್ಲಿ ರಕ್ತದಾನದ ಮಹತ್ವವನ್ನು ಬಳಗದ ಸದಸ್ಯರು ತಿಳಿಸಿದರು.ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ ಎಂ.ಡಿ.ಪಾರ್ಥ ಸಾರಥಿ, ಬಳಗದ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ವಿನಯ್‌ಕುಮಾರ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವ ರಾಜ್ ಬಸಪ್ಪ, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ಅಪೂರ್ವ ಸುರೇಶ್, ಲೋಹಿತ್ ಶ್ರೀಕಾಂತ್ ಕಶ್ಯಪ್, ಶಿವಕುಮಾರ್ ಇದ್ದರು.

ಕಾಣೆಯಾಗಿದ್ದಾರೆ



ಹೆಸರು: ನಾಗರಾಜ 57 ವರ್ಷ, ಚಹರೆ: 5 ಅಡಿ ಎತ್ತರ, ಕೋಲು ಮುಖ, ಗೋದಿ ಬಣ್ಣ ಮೈಕಟ್ಟು, ತಲೆಯ ಮುಂಭಾಗ ಕೂದಲು ಇರುವುದಿಲ್ಲ (ಬೋಕ್ಕ ತಲೆ) ಹಾಗೂ ಹಣೆಯ ಮೇಲೆ ಹಳೇ ಗಾಯದ ಗುರುತು ಇರುತ್ತದೆ. ನಾಗರಾಜ ಬಿನ್ ವೆಂಕಟಪ್ಪ ಇವರು ಕೆಪಿಟಿಸಿಎಲ್ ಶಿವಮೊಗ್ಗದಲ್ಲಿ ಖಾಯಂ ಉದ್ಯೋಗಿಯಾಗಿದ್ದು, ದಿನಾಂಕ: 09-03-2022ರಂದು ವಾಸದ ಮನೆಯಿಂದ ಹೊರಟವರು ಇದುವರೆಗೂ ಪತ್ತೆಯಾಗಿರುವುದಿಲ್ಲ. ತತ್ಸಬಂಧವಾಗಿ ದಿನಾಂಕ: 25-03-2022ರಂದು ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ (ದೂರು ಸಂಖ್ಯೆ: 0088/2022) ದೂರು ದಾಖಲಿಸುತ್ತೇವೆ. ಇವರು ಎಲ್ಲಿಯಾದರೂ ಪತ್ತೆಯಾದಲ್ಲಿ ಈ ಕೆಳಗಿನ ವಿಳಾಸ ಅಥವಾ ಮೊಬೈಲ್ ನಂಬರ್‌ಗಳಿಗೆ ಸಂಪರ್ಕಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಸಂಪರ್ಕಿಸಬೇಕಾದ ವಿಳಾಸ
ರಾಚಮ್ಮ ಕೋಂ ನಾಗರಾಜ, ಹಾತಿನಗರ, ಹರಿಗೆ, ವಿದ್ಯಾನಗರ ಅಂಚೆ, ಶಿವಮೊಗ್ಗ ತಾ॥
ಮೊ: 9164525135, 9916908515

ದಿಗ್ವಿಜಯ 24X7 NEWS DIGHVIJAY
ಕನ್ನಡಿಗರ ಧ್ವನಿ

ಇಂದಿನ ಕಾರ್ಯಕ್ರಮಗಳು

ಶುಭೋದಯ ಕರ್ನಾಟಕ	:	ಬೆಳಗ್ಗೆ 5.57 ಕ್ಕೆ
ಸಂಸ್ಕೃತಿ	:	ಬೆಳಗ್ಗೆ 6.15 ಕ್ಕೆ
ನೇಗಿಲಯೋಗಿ	:	ಬೆಳಗ್ಗೆ 6.27 ಕ್ಕೆ
ನಮಸ್ತೆ ಕರ್ನಾಟಕ	:	ಬೆಳಗ್ಗೆ 6.57 ಕ್ಕೆ ಮತ್ತು ಸಂಜೆ 5.57 ಕ್ಕೆ
30 ನಿಮಿಷ, 60 ಸುದ್ದಿ	:	ಬೆಳಗ್ಗೆ 7.27 ಕ್ಕೆ
ಸ್ಪೋರ್ಟ್ಸ್ ಕ್ಲಬ್	:	ಬೆಳಗ್ಗೆ 7.57 ಕ್ಕೆ
ಬ್ರೇಕಿಂಗ್ ಬುಲೆಟಿನ್	:	ಬೆಳಗ್ಗೆ 8.27 ಕ್ಕೆ
ದಿಗ್ವಿಜಯ ಎಕ್ಸ್‌ಕ್ಲೂಸಿವ್	:	ಬೆಳಗ್ಗೆ 9.57 ಕ್ಕೆ
ದಿಗ್ವಿಜಯ ನ್ಯೂಸ್ (LIVE)	:	ಬೆಳಗ್ಗೆ 10.57 ಕ್ಕೆ
ದಿಗ್ವಿಜಯ ನ್ಯೂಸ್ (LIVE)	:	ಬೆಳಗ್ಗೆ 11.57 ಕ್ಕೆ
MID DAY NEWS	:	ಮಧ್ಯಾಹ್ನ 12.57 ಕ್ಕೆ
ಸೂಪರ್ ಎಕ್ಸ್‌ಕ್ಲೂಸಿವ್	:	ಮಧ್ಯಾಹ್ನ 2.57 ಕ್ಕೆ
ದಿಗ್ವಿಜಯ ನ್ಯೂಸ್ (LIVE)	:	ಮಧ್ಯಾಹ್ನ 3.57 ಕ್ಕೆ
ಧರ್ಮೋ ರಕ್ಷತಿ ರಕ್ಷಿತಃ	:	ಸಂಜೆ 4.27 ಕ್ಕೆ
ಮೂರನೇ ಕಣ್ಣು	:	ಸಂಜೆ 5.27 ಕ್ಕೆ
ಸಿನಿ STAR	:	ಸಂಜೆ 6.27 ಕ್ಕೆ
ದಿ ಮೇಜರ್ ಸ್ಟೋರಿ	:	ಸಂಜೆ 6.57 ಕ್ಕೆ
ರೆಡ್ ಅಲರ್ಟ್	:	ರಾತ್ರಿ 7.27 ಕ್ಕೆ
D FOCUS	:	ರಾತ್ರಿ 7.57 ಕ್ಕೆ
ನ್ಯೂಸ್ OUTLOOK	:	ರಾತ್ರಿ 8.27 ಕ್ಕೆ
INSIDE ಸ್ಟೋರಿ	:	ರಾತ್ರಿ 9.27 ಕ್ಕೆ
BIG ಬೆಂಗಳೂರು	:	ರಾತ್ರಿ 9.57 ಕ್ಕೆ
ದಿ SPECIAL	:	ರಾತ್ರಿ 10.27 ಕ್ಕೆ
DAY ROUND UP	:	ರಾತ್ರಿ 10.57 ಕ್ಕೆ

*ಕೊನೆ ಕ್ಷಣದ ಬದಲಾವಣೆ ಹೊರತಾಗಿ

Dighvijaya News / Dighvijaya24x7News / dighvijayanews / Dighvijay24X7

ಪ್ರಸಾರದ ಸಮಸ್ಯೆಗಳಿಗೆ ಸಂಪರ್ಕಿಸಿ:
76249 65333 / 88844 32303 / 080-22537345
CIN: U92113KA2007PTC043486
VRL MEDIA PVT LTD

ಗೌರವಾನ್ವಿತ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹುಣಸೂರು

ಅಸಲು ದಾವಾ ಸಂಖ್ಯೆ : 125/2019

ವಾದಿ : ಶ್ರೀಮತಿ ಜವರಮ್ಮ ಮತ್ತು ಇತರರು ಕೋಂ ಲೇಟ್ ತಮ್ಮಯ್ಯ ವಾಸ: ಗಣೇಶ ದೇವಸ್ಥಾನದ ಬೀದಿ ಹುಣಸೂರು

-ವಿರುದ್ಧ-

ಪ್ರತಿವಾದಿಗಳು : 1. ಶ್ರೀ ಕಾಳಯ್ಯ ಮತ್ತು ಇತರರು ಪ್ರತಿವಾದಿಗಳು : ಡಿ. 8. ಲಕ್ಷ್ಮಿ ಕೋಂ ಅಣ್ಣಯ್ಯ ಬಿನ್ ಲೇಟ್ ಜವರಯ್ಯ ವಾಸ: ಮಹದೇಶ್ವರ ದೇವಸ್ಥಾನದ ಹತ್ತಿರ ಕಂಪಲಾಪುರ, ಪಿರಿಯಾಪಟ್ಟಣ ತಾಲ್ಲೂಕು. ಡಿ. 11 ಶ್ರೀಮತಿ ಸುಂದರಿ ಬಿನ್ ಲೇಟ್ ಜಯಮ್ಮ ವಾಸ: ಬೆಟ್ಟದ ತುಂಗ ಗ್ರಾಮ ರವಂದೂರು ಹೋಬಳಿ, ಪಿರಿಯಾ ಪಟ್ಟಣ ಡಿ.17 ಶ್ರೀಮತಿ ಹೇಮಾವತಿ ಬಿನ್‌ಲೇಟ್ ಚೆನ್ನಪ್ಪ ಕೋಂ ರಂಗಪ್ಪ ವಾಸ: ಹಡ್ಲಿಮನೆ ರಸ್ತೆ, ಹಾಸನ್ ಡಿ.21 ಶ್ರೀಮತಿ ಹೊನ್ನಮ್ಮ ಬಿನ್ ಲೇಟ್ ಸಣ್ಣಮ್ಮ & ಕಂಗಯ್ಯ ವಾಸ: ಕೆನ್ನಕೆರೆ ಗ್ರಾಮ ಗಂಡ್ಸಿ ಹೋಬಳಿ, ಅರಸಿಕೆರೆ ತಾಲ್ಲೂಕು. ಹಾಸನ್ ಜಿಲ್ಲೆ.

ಕೋರ್ಟ್ ನೋಟೀಸ್

ಏನೆಂದರೆ, ಮೇಲ್ಕಂಡ ವಾದಿಯಾದ ಶ್ರೀಮತಿ ಜವರಮ್ಮ ವರು ಪ್ರತಿವಾದಿ ಶ್ರೀ ಕಾಳಯ್ಯ ಮತ್ತು ಇತರರ ವಿರುದ್ಧ ಷೆಡ್ಯೂಲ್ ಸ್ವತ್ತಿಗೆ ಸಂಬಂಧ ಪಟ್ಟ ಹಾಗೆ ಮೇಲ್ಕಂಡ ದಾವೆ ಹೂಡಿದ್ದು, ತಮ್ಮನ್ನು ಸದರಿ ದಾವೆಯಲ್ಲಿ 8, 11, 17 & 21 ಪ್ರತಿವಾದಿಗಳನ್ನಾಗಿ ಮಾಡಿದ್ದು, ಈ ಮೇಲ್ಕಂಡ ಸದರಿ ದಾವೆಯಲ್ಲಿ ತಮಗೆ ಹಲವಾರು ಬಾರಿ ಕೋರ್ಟ್ ನೋಟೀಸ್ ಸಮನ್ಸ್ ಹೊರಡಿಸಿದ್ದು, ಆದರೆ ತಾವು ಸದರಿ ಸಮನ್ಸನ್ನು ತೆಗೆದುಕೊಳ್ಳದೆ ಡೋರ್ ಲಾಕ್ ಎಂದು ವಾಪಸ್ ಬಂದಿದ್ದು, ಆ ಪ್ರಕಾರವಾಗಿ ಈ ಪತ್ರಿಕಾ ಪ್ರಕಟಣೆಯ ಮೂಲಕ ತಮಗೆ ನೋಟೀಸ್ ಅನ್ನು ನೀಡುತ್ತಿದ್ದು, ಅಂತಿಮವಾಗಿ ಸದರಿ ದಾವೆಯು ದಿನಾಂಕ: 6/7/22ರ ಬೆಳಿಗ್ಗೆ 11 ಗಂಟೆಗೆ ತಮ್ಮ ಹಾಜರಾತಿಗಾಗಿ ಇದ್ದು, ಸದರಿ ದಿನ ಮತ್ತು ಸಮಯದಂದು ತಾವು ಖುದ್ದು ಅಥವಾ ತಮ್ಮ ವಕೀಲರ ಮೂಲಕ ಮೇಲ್ಕಂಡ ದಾವೆಯಲ್ಲಿ ಹಾಜರಾಗಬೇಕಾಗಿದ್ದು ತಪ್ಪಿದಲ್ಲಿ ಮೇಲ್ಕಂಡ ದಾವೆಯಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಏಕ ಪಕ್ಷೀಯವಾಗಿ ಅಂತಿಮವಾಗಿ ಆದೇಶವಾಗುವುದೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಐಟಂ ನಂ.1: ಹುಣಸೂರು ತಾಲ್ಲೂಕು, ಕಸಬಾ ಹೋಬಳಿ ದೊಡ್ಡ ಹುಣಸೂರು ಗ್ರಾಮದಲ್ಲಿರುವ ಸರ್ವೆ.ನಂ. 136/1 ರಲ್ಲಿ 33 ಗುಂಟೆ ಜಮೀನಿಗೆ ಚೆಕ್ ಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ತಂಗಮ್ಮನವರ ಜಮೀನು, ದಕ್ಷಿಣಕ್ಕೆ : ಎ.ಪಿ.ಎಂ.ಸಿ ಕಾಂಪೌಂಡ, ಉತ್ತರಕ್ಕೆ : ಚನ್ನಯ್ಯನವರ ಜಮೀನು.

ಐಟಂ ನಂ. 2: ಹುಣಸೂರು ಟೌನ್, ವಾರ್ಡ್ ನಂ. 18 ಗಣೇಶ ದೇವಸ್ಥಾನದ ರಸ್ತೆ ಯಲ್ಲಿರುವ ಖಾತ ನಂ 1317/1170 ರ 18x125 ಅಡಿ ಯ ನಾಡ ಹೆಂಚಿನ ಮನೆಗೆ ಚೆಕ್ ಬಂದಿ: ಪೂರ್ವಕ್ಕೆ : ಕರಿಗೌಡ, ನಿಂಗರಾಜು, ಸುದೀರ್ ಮತ್ತು ಇತರರ ಮನೆ ಪಶ್ಚಿಮಕ್ಕೆ : ವಸುದೇವರ ಮನೆ, ದಕ್ಷಿಣಕ್ಕೆ : ಮುಖ್ಯ ರಸ್ತೆ, ಉತ್ತರಕ್ಕೆ : ಮೈಲಾರಪ್ಪನ ಸ್ವತ್ತು.

ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ದಿನಾಂಕ: 10/06/2022ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹುಣಸೂರು

ವಾದಿ
ವಾದಿಯ ಪರ ವಕೀಲರು,
ಶ್ರೀ ಪಾಲಾಕ್ಷ, ವಕೀಲರು ನಂ 645, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು

ICICI Home Finance

ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ(ಪೂರ್ವ), ಮುಂಬೈ -400059, ಭಾರತ
ಶಾಖಾ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಕೆಳ ಮಹಡಿ, ಶ್ರೀ ರಾಘವೇಂದ್ರ ಮ್ಯಾನ್ಷನ್, ನಂ. 2767/ಬಿ, ನ್ಯೂ ನಂ. 83/ಬಿ, ಕಾಂತರಾಜ ಅರಸ್ ರಸ್ತೆ, 1ನೇ ಮೇನ್, ಸರಸ್ವತಿಪುರಂ, ಮೈಸೂರು - 570009
ಶಾಖಾ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ.165 & 166, ಮಂಜುನಾಥ ಚೇಂಬರ್ಸ್ ಶಂಕರ ನಗರ, ಮುಖ್ಯ ರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು - 560096

(ನಿಯಮ 8 (6) ರ ನಿಬಂಧನೆ ನೋಡಿ)

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ನೋಟಿಸ್

ಹಣಕಾಸು ಆಸ್ತಿಗಳ ಸಂರಕ್ಷಣೆ ಮತ್ತು ಪುನರ್‌ರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ಮತ್ತು ನಿಯಮ 8(6) ಜೊತೆ ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ನೋಟೀಸು.

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರ(ರು)ಗೆ ಕೆಳಗೆ ವಿವರಿಸಲಾದ ಸ್ಥಿರ ಆಸ್ತಿಯನ್ನು ಸುರಕ್ಷಿತ ಸಾಲಗಾರರಿಗೆ ಅಡಮಾನ/ಹೊಣೆಯಾಗಿಸಿದ್ದು, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಅವುಗಳನ್ನು ಭೌತಿಕ ಸ್ವಾಧೀನತೆಗೆ ತೆಗೆದುಕೊಂಡಿದ್ದು, ಅವುಗಳನ್ನು ಈ ಕೆಳಗೆ ನೀಡಲಾಗಿರುವ ಸಂಕ್ಷಿಪ್ತ ವಿವರಗಳ ಪ್ರಕಾರ ''ಎಲ್ಲಿದೆಯೋ ಹಾಗೇ'', ''ಏನಿದೆಯೋ ಹಾಗೇ'', ಮತ್ತು ''ಹೇಗಿದೆಯೋ ಹಾಗೆ'' ಆಧಾರದಲ್ಲಿ ಮಾರಾಟ ಮಾಡಲಾಗುತ್ತದೆ:

ಕ್ರ. ಸಂ	ಸಾಲಗಾರ(ರು)/ಸಹ-ಸಾಲಗಾರರು/ಜಾಮೀನುದಾರರ/ಕಾನೂನು ಉತ್ತರಾಧಿಕಾರಿಗಳ ಹೆಸರು ಸಾಲ ಖಾತೆ ಸಂ.	ಋಣಭಾರಗಳೊಂದಿಗೆ, ಯಾವುದಾದರೂ ಇದ್ದಲ್ಲಿ ಭದ್ರತಾ ಆಸ್ತಿ(ಗಳ) ವಿವರಗಳು	ಬಾಕಿ ಮೊತ್ತ	ಮೀಸಲು ಬೆಲೆ	ಭದ್ರತಾ ಹಣ ಠೇವಣಿ	ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(A)	(B)	(C)	(D)	(E)		(F)	(G)
1.	ಮಂಜುಳಾ ಕೆ (ಸಾಲಗಾರ) ಸಂಜೀವ ಕುಮಾರ ಎಸ್ (ಸಹ-ಸಾಲಗಾರ) ಸಾಲ ಖಾತೆ ಸಂಖ್ಯೆ LHMYS00001321490	ಸೈಟ್ ನಂ.46, ಆಸ್ತಿ ನಂ. 305/46, ಸೈಟ್ ನಂ.47, ಆಸ್ತಿ ನಂ.305/47, ಯುನಿಕ್ ನಂ.152200404161021012 ಮತ್ತು ಯುನಿಕ್ ನಂ.152200404161021014, ಸರ್ವೇ ನಂ. 12/1, ಮೊಗಳಾಪುರ ಗ್ರಾಮ, ಕೋಗಿಲ್ವ ಗ್ರಾಮಪಂಚಾಯತಿ, ಮೈಸೂರು ತಾಲೂಕು, ಮೈಸೂರು ಜಿಲ್ಲೆ-571103	ರೂ. 25,67,235/- (ಜೂನ್ 07, 2022 ರಂತೆ)	ರೂ. 18,24, 000/-	ರೂ. 1,82,400/-	28ನೇ ಜೂನ್ 2022 ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	30ನೇ ಜೂನ್ 2022 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ
2.	ಸತೀಶ್ ಎಸ್ (ಸಾಲಗಾರ) ಸಾಲ ಖಾತೆ ಸಂಖ್ಯೆ LHMYS00001292045	ಸೈಟ್ ನಂ.72, ಸರ್ವೇ ನಂ.97/1 & 97/2, ಎಫ್ ಬ್ಲಾಕ್, ಯಶ್ ಮೆಗಾ ಸಿಟಿ ಲೇಔಟ್, ಅಂಕನಹಳ್ಳಿ ಗ್ರಾಮ, ಬೀಕೆರೆ ಹೋಬಳಿ, ಹುಣಸೂರ ತಾಲೂಕ ಮೈಸೂರು ಜಿಲ್ಲೆ-571103	ರೂ. 12,89,918/- (ಜೂನ್ 07, 2022 ರಂತೆ)	ರೂ. 11,49, 120/-	ರೂ. 1,14,912/-	28ನೇ ಜೂನ್ 2022 ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	30ನೇ ಜೂನ್ 2022 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ
3.	ಸತೀಶ್ ಎಸ್ (ಸಾಲಗಾರ) ಸಾಲ ಖಾತೆ ಸಂಖ್ಯೆ LHMYS00001284825	ಸೈಟ್ ನಂ.73, ಸರ್ವೇ ನಂ.97/1 & 97/2, ಎಫ್ ಬ್ಲಾಕ್, ಯಶ್ ಮೆಗಾ ಸಿಟಿ ಲೇಔಟ್, ಅಂಕನಹಳ್ಳಿ ಗ್ರಾಮ, ಬೀಕೆರೆ ಹೋಬಳಿ, ಹುಣಸೂರ ತಾಲೂಕ ಮೈಸೂರು ಜಿಲ್ಲೆ-571103	ರೂ. 11,35,819/- (ಜೂನ್ 07, 2022 ರಂತೆ)	ರೂ. 9,44, 334/-	ರೂ. 94,433/-	28ನೇ ಜೂನ್ 2022 ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	30ನೇ ಜೂನ್ 2022 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ
4.	ಶ್ರೀನಿವಾಸ ಆರ್ (ಸಾಲಗಾರ) ರಾಮು ಎ (ಸಹ-ಸಾಲಗಾರ) ಸಾಲ ಖಾತೆ ಸಂಖ್ಯೆ LHMYS00001303176	ಸೈಟ್ ನಂ. 84, ಸರ್ವೇ ನಂ.184/3, ನಾಗಪ್ಪ ಲೇಔಟ್, ಜಯಪುರ ಗ್ರಾಮ, ಮತ್ತು ಹೋಬಳಿ, ಮೈಸೂರು ತಾಲೂಕ ಮತ್ತು ಮೈಸೂರು ಜಿಲ್ಲೆ-570008	ರೂ. 6,31,573/- (ಜೂನ್ 07, 2022 ರಂತೆ)	ರೂ. 5,76, 800/-	ರೂ. 57,680/-	28ನೇ ಜೂನ್ 2022 ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	30ನೇ ಜೂನ್ 2022 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ
5.	ಸುಬ್ರಮಣ್ಯ ಎಮ್ (ಸಾಲಗಾರ) ರೂಪಶ್ರೀ ಎ ಪಿ (ಸಹ-ಸಾಲಗಾರ) ಸಾಲ ಖಾತೆ ಸಂಖ್ಯೆ LHMYS00001285869	ಸೈಟ್ ನಂ.33, ಸರ್ವೇ ನಂ.11/2 11/3,5/6, 8/1, ರವೀಂದ್ರನಾಥ ಟ್ಯಾಗೋರ ಲೇಔಟ್, ವೈಲುಕುಪ್ಪ ಸ್ಯಾಟಲೈಟ್ ಟೌನ್, ಗುಡ್ಡೆನಹಳ್ಳಿ ಗ್ರಾಮ, ಹನ್ಸಾನಹಳ್ಳಿ ಹೋಬಳಿ, ಪಿರಿಯಾಪಟ್ಟ ತಾಲೂಕ ಮೈಸೂರು ಜಿಲ್ಲೆ-571104	ರೂ. 6,67,138/- (ಜೂನ್ 07, 2022 ರಂತೆ)	ರೂ. 6,72, 000/-	ರೂ. 67,200/-	28ನೇ ಜೂನ್ 2022 ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ	30ನೇ ಜೂನ್ 2022 ಮಧ್ಯಾಹ್ನ 02:00 ಗಂಟೆಯಿಂದ ಮಧ್ಯಾಹ್ನ 03:00 ಗಂಟೆಯವರೆಗೆ

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ ಆಕ್ಷನ್ ಟೈಗರ್ ವೆಬ್‌ಸೈಟ್‌ನಲ್ಲಿ (URL ಲಿಂಕ್-https://sarfaesi.auctiontiger.net/EPROC/) ನಡೆಸಲಾಗುತ್ತದೆ. ಅಡಮಾನದಾರರು/ನೋಟಿಸ್‌ದಾರರಿಗೆ 29ನೇ ಜೂನ್ 2022 ರ ಸಂಜೆ 5: 00 ಗಂಟೆಯೊಳಗಾಗಿ ಮುಂದಿನ ಬಡ್ಡಿಯೊಂದಿಗೆ ಒಟ್ಟು ಬಾಕಿಯನ್ನು ಪಾವತಿಸಲು ಕೊನೆಯ ಅವಕಾಶವನ್ನು ನೀಡಲಾಗುತ್ತದೆ. ಇಲ್ಲವಾದಲ್ಲಿ ಈ ಆಸ್ತಿಗಳನ್ನು ಮೇಲೆ ತಿಳಿಸಿದ ಶೆಡ್ಯೂಲ್ ನಂತೆ ಮಾರಾಟ ಮಾಡಲಾಗುತ್ತದೆ.

ನಿರೀಕ್ಷಿತ ಬಿಡ್ದಾರ (ರು) ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಕೆಳ ಮಹಡಿ, ಶ್ರೀ ರಾಘವೇಂದ್ರ ಮ್ಯಾನ್ಷನ್, ನಂ. 2767/ಬಿ, ನ್ಯೂ ನಂ. 83/ಬಿ, ಕಾಂತರಾಜ ಅರಸ್ ರಸ್ತೆ, 1ನೇ ಮೇನ್, ಸರಸ್ವತಿಪುರಂ, ಮೈಸೂರು - 570009 ಇಲ್ಲಿಗೆ ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ) ಆರ್‌ಟಿಜಿಎಸ್ /ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) (ಕಾಲಂ ಇ ಗಮನಿಸಿ) ಅನ್ನು 29ನೇ ಜೂನ್ 2022 ರ ಸಂಜೆ 4:00 ಗಂಟೆಯೊಳಗಾಗಿ ಸಲ್ಲಿಸಬೇಕು. ದಯವಿಟ್ಟು ಗಮನಿಸಿ, ನಿರೀಕ್ಷಿತ ಬಿಡ್ದಾರ (ರು) ಮೇಲೆ ಉಲ್ಲೇಖಿಸಿದ ಸಮಯಕ್ಕೆ ತಮ್ಮ ಆಫರ್‌ಗಳನ್ನು ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ದಾಖಲೆಗಳ ಸಹಿ ಮಾಡಿದ ಪ್ರತಿಯನ್ನು 29ನೇ ಜೂನ್ ರ ಸಂಜೆ 5:00 ಗಂಟೆಯೊಳಗಾಗಿ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಕೆಳ ಮಹಡಿ, ಶ್ರೀ ರಾಘವೇಂದ್ರ ಮ್ಯಾನ್ಷನ್, ನಂ. 2767/ಬಿ, ನ್ಯೂ ನಂ. 83/ಬಿ, ಕಾಂತರಾಜ ಅರಸ್ ರಸ್ತೆ, 1ನೇ ಮೇನ್, ಸರಸ್ವತಿಪುರಂ, ಮೈಸೂರು - 570009 ಇಲ್ಲಿ ಸಲ್ಲಿಸಬೇಕು. ಭದ್ರತಾ ಹಣ ಠೇವಣಿ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಅನ್ನು ಮೈಸೂರಿನಲ್ಲಿ ಪಾವತಿಸಬೇಕಾದ ''ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಆಕ್ಷನ್'' ಎಂಬ ಹೆಸರಿನಲ್ಲಿ ನ್ಯಾಷನಲೈಸ್ಡ್/ಶೆಡ್ಯೂಲ್ಡ್ ಬ್ಯಾಂಕಿನಿಂದ ಪಡೆದಿರಬೇಕು.

ಹರಾಜಿನ ಷರತ್ತು ಮತ್ತು ನಿಬಂಧನೆಗಳು, ಪರಿಶೀಲನೆಗೆ ಸಂಬಂಧಿಸಿದ ಅಥವಾ ಟೆಂಡರ್ ಸಲ್ಲಿಕೆಗೆ ಸಂಬಂಧಿಸಿದ ಯಾವುದೇ ಸ್ಪಷ್ಟೀಕರಣಗಳಿಗಾಗಿ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ 7021072869 ಸಂಪರ್ಕಿಸಿ.

ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಹೊಂದಿರುತ್ತಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.icicihfc.com/ ಗೆ ಭೇಟಿ ನೀಡಿ

ದಿನಾಂಕ: ಜೂನ್ 15, 2022
ಸ್ಥಳ: ಮೈಸೂರು

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ನಮ್ಮೂರಲ್ಲಿಂದು

■ **ಉದ್ಘಾಟನೆ:** ಚಾಮುಂಡಿ ವಲಯ ಅಂತರ ಕಾಲೇಜು ಫುಟ್‌ಬಾಲ್ ಪಂದ್ಯಾವಳಿ ಉದ್ಘಾಟನೆ, ಮೈಸೂರು ವಿವಿ, ಸೆಪಿಯಂಟ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಅತಿಥಿಗಳು: ಡಾ.ಪಿ.ಕೃಷ್ಣಯ್ಯ, ದಲ್ಜಿತ್ ರಾಮ್ ಚೌಧರಿ, ಸ್ಥಳ: ಮೈಸೂರು ವಿವಿ ಫುಟ್‌ಬಾಲ್ ಗ್ರೌಂಡ್, ಬೆ.8

■ **ಉದ್ಘಾಟನೆ:** ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಉದ್ಘಾಟನೆ. ಎಸ್. ಪರಮಶಿವಯ್ಯ, ಪ್ರೊ.ಕೆ.ಎಸ್.ಪಂಚಾಕ್ಷರಸ್ವಾಮಿ, ಮೊರಬದ ಮಲ್ಲಿಕಾರ್ಜುನ, ಸ್ಥಳ: ಜಗನ್ಮೋಹನ ಅರಮನೆ, ಬೆ.10

■ **ಉದ್ಘಾಟನೆ:** ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳ ಒಂದು ದಿನದ ಮಾಹಿತಿ ಶಿಬಿರ ಉದ್ಘಾಟನೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅತಿಥಿಗಳು: ಪೂರ್ಣಿಮಾ, ಪಿ.ಜಿ.ಆರ್. ಸಿಂಧ್ಯ, ರಾಮಚಂದ್ರರಾಜೇ ಅರಸ್, ಸ್ಥಳ: ಶ್ರೀಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ, ಬೆ.10.30

■ **ಶರಣದರ್ಶನ-55:** ಆನ್‌ಲೈನ್ ದತ್ತಿ ಕಾರ್ಯಕ್ರಮ 'ಶರಣದರ್ಶನ-55', ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತು, ಅತಿಥಿಗಳು: ಕೃ.ಪಾ.ಮಂಜುನಾಥ್, ಮ.ಗು.ಸದಾನಂದಯ್ಯ, ಸಂ.5

■ **ಚಿಂತನ ಮಂಥನ**, ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆ, ಅತಿಥಿಗಳು: ಆರ್.ವಿ.ಗಂಗಾಧರಪ್ಪ, ಸ್ಥಳ: ರಾಮಕೃಷ್ಣ ನಗರದ ಐ ಬ್ಲಾಕ್ ಸಂಸ್ಥೆ ಆವರಣ, ಸಂ.6

■ **ನಾಟಕ ಪ್ರದರ್ಶನ:** ಗ್ರೀಷ್ಮ ರಂಗೋತ್ಸವದಲ್ಲಿ ವಾಸಾಂಸಿ ಜೀರ್ಣಾನಿ ನಾಟಕ ಪ್ರದರ್ಶನ, ಸ್ಥಳ: ರಂಗಾಯಣದ ಭೂಮಿಗೀತ, ಸಂ.6.30

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮೈಸೂರು ಸಿಟಿ, ಉದಯಗಿರಿ, 4ನೇ ಹಂತ, 4ನೇ ಕ್ರಾಸ್, ಕೆ.ಹೆಚ್.ಬಿ ಮನೆ, ಮನೆ ನಂ. ಇಡಬ್ಲ್ಯೂ.ಎಸ್.166ರಲ್ಲಿ ವಾಸವಾಗಿರುವ ಶ್ರೀ.ಎಸ್.ನಾಗಲಿಂಗಾಚಾರಿ ರವರು ಸದರಿಯವರ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮನೆ ಕಟ್ಟಲು ಸಾಲವನ್ನು ನಮ್ಮ ಕಕ್ಷಿದಾರರಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಆರ್.ಎ.ಸಿ.ಪಿ.ಸಿ, ಮೈಸೂರುರವರಲ್ಲಿ ಕೋರಿರುತ್ತಾರೆ. ಸದರಿ ಶ್ರೀ.ಎಸ್.ನಾಗಲಿಂಗಾಚಾರಿರವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ:05.05.1983ರ ಮಂಜೂರಾತಿ ಪತ್ರ, ದಿನಾಂಕ:09.04.1984ರ ಸ್ವಾಧೀನ ಪತ್ರ ಮತ್ತು ದಿನಾಂಕ:28.02.2003ರ ಕೆ.ಎಚ್.ಬಿ, ಮೈಸೂರುರವರಿಂದ ಪಡೆದಿರುವ ನೋ.ಸಂಖ್ಯೆ.15280ರ ಕ್ರಯಪತ್ರಗಳು ಲ್ಯಾಮಿನೇಟ್ ಪ್ರತಿಗಳನ್ನು ಹೊಂದಿರುತ್ತಾರೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 14 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವ ಆಸಕ್ತಿ ಇಲ್ಲವೆಂದು ಪರಿಗಣಿಸಲಾಗುವುದು.

ಅನುಸೂಚಿ ಸ್ವತ್ತು

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಮಹದೇವಪುರ ಬಡಾವಣೆ 1ನೇ ಹಂತದ -ಲ್ಲಿರುವ ಇಡಬ್ಲ್ಯೂಎಸ್ ಮನೆ ನಂಬರ್ 166ರ ಸ್ವತ್ತಿಗೆ ಚಕ್ಕುಬಂದಿ. **ಪೂರ್ವಕ್ಕೆ :** ಮನೆ ನಂಬರ್ 168, **ಪಶ್ಚಿಮಕ್ಕೆ :** ರಸ್ತೆ, **ಉತ್ತರಕ್ಕೆ :** ರಸ್ತೆ, **ದಕ್ಷಿಣಕ್ಕೆ :** ಮನೆ ನಂಬರ್ 165, ಈ ಮಧ್ಯದಲ್ಲಿರುವ ಪೂರ್ವ-ಪಶ್ಚಿಮ 9.15 ಮೀಟರ್‌ಗಳು, ಉತ್ತರ-ದಕ್ಷಿಣ 5.50 ಮೀಟರ್‌ಗಳುಳ್ಳ ಪೂರ್ತಾ ಸ್ವತ್ತು.

ವಿಳಾಸ: **ಶ್ರೀ.ಎಸ್.ಎಸ್.ಜಿನಚಂದ್ರನ್,** ವಕೀಲರು, # 1206/A, CH-31/A, 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ, ಮೈಸೂರು-570005.

ದಿನಾಂಕ:25.05.2022 ಸ್ಥಳ: ಮೈಸೂರು

ವಿದ್ಯಾರ್ಥಿಗಳಿಗೆ ಅನುಕೂಲ ವಿಸಿ ಅಭಿಮತ

ಉದ್ದಿಮೆಯೊಂದಿಗೆ ಕೆಎಸ್‌ಒಯು ಒಪ್ಪಂದ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಂಗಳವಾರ ವಿವಿಧ ಉದ್ದಿಮೆಗಳೊಂದಿಗೆ ಒಪ್ಪಂದ ಮಾಡಿಕೊಂಡಿತು.

ಸುಪ್ರೀಂ ಫಾರ್ಮಾಸ್ಯೂಟಿಕಲ್ಸ್, ವಿಎಸ್‌ಟಿ ಟಿಲ್ಲರ್ಸ್, ಜಿಆರ್‌ಎಸ್ ಇಂಜಿನಿಯರಿಂಗ್, ತ್ರಿವೇಣಿ ಇಂಜಿನಿಯರಿಂಗ್, ಬ್ರೇಕ್ಸ್ ಇಂಡಿಯಾ ಲಿಮಿಟೆಡ್, ಸ್ಪೈಡರ್ಜೋರ್ಜ್, ಕೇನ್ಸ್ ಟೆಕ್ನಾಲಜೀಸ್ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್ ಮಾತನಾಡಿ, ಇಂದಿನ ದಿನಗಳಲ್ಲಿ ವಿವಿ ಹಾಗೂ ಉದ್ದಿಮೆಗಳ ನಡುವಿನ ಅಂತರ ಹೆಚ್ಚಾಗುತ್ತಿದೆ. ಎಲ್ಲ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಈಗ ಇಂಟರ್ನ್‌ಶಿಪ್ ಕಡ್ಡಾಯ ಮಾಡಲಾಗಿದೆ. ಉದ್ದಿಮೆಗಳಿಗೂ ಪ್ರತಿಯೊಬ್ಬ ವಿದ್ಯಾರ್ಥಿಗೆ ಇಂಟರ್ನ್‌ಶಿಪ್ ಅವಕಾಶ ನೀಡುವುದು ಕಷ್ಟ. ಇಂಟರ್ನ್‌ಶಿಪ್ ಕೇವಲ ಪತ್ರದಲ್ಲಿ ಉಳಿದಿದ್ದು ನಿಜವಾದ ಅರ್ಥದಲ್ಲಿ ಯಶಸ್ವಿಯಾಗಿಲ್ಲ ಎಂದು ತಿಳಿಸಿದರು.

ಮುಕ್ತ ವಿವಿ ಪ್ರಸ್ತುತ ಕರ್ನಾಟಕದಲ್ಲಿ ದೂರ ಶಿಕ್ಷಣ ನೀಡುವ ಏಕೈಕ ಸಂಸ್ಥೆಯಾಗಿದ್ದು, ಹೆಚ್ಚಿನ ವಿದ್ಯಾರ್ಥಿಗಳು ಗ್ರಾಮೀಣ ಹಾಗೂ ಬಡತನದಿಂದ ಬಂದವರಾಗಿರುತ್ತಾರೆ. ಇವರು ಕೆಲಸ ಕೊಡಿಸುವಂತಹ ಪದವಿಗಳಿಗಾಗಿ ಎದುರು ನೋಡುತ್ತಿದ್ದು, ಇಂತಹ ಒಪ್ಪಂದಗಳು ಅವರಿಗೆ ಸಹಕಾರಿಯಾಗಲಿವೆ ಎಂದು ತಿಳಿಸಿದರು.

ಸಮಾಜದ ಉನ್ನತೀಕರಣಕ್ಕಾಗಿ ಹಾಗೂ ಉದ್ಯೋಗಾರ್ಹ ಪದವೀಧರರನ್ನು ಸೃಷ್ಟಿಸುವಲ್ಲಿ ಮುಕ್ತ ವಿವಿ ಜತೆ ಕೈ ಜೋಡಿಸುವಂತೆ ಅವರು ವಿವಿಧ ಕಂಪನಿಗಳ ಪ್ರತಿನಿಧಿಗಳನ್ನು ವಿನಂತಿಸಿದರು. ಒಪ್ಪಂದದಿಂದ ಮುಕ್ತ ವಿವಿಯ ಜತೆ ವಿವಿಧ ಕಂಪನಿಗಳ ಪರಿಣತಿ ವಿನಿಮಯ, ಕನ್ಸಲ್ಟೆನ್ಸಿ ಪ್ರಾಜೆಕ್ಟ್ ಗಳು, ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್ ನೀಡಿಕೆ, ಉದ್ದಿಮೆ ಭೇಟಿ, ಜಂಟಿ ಸಂಶೋಧನೆಗಳು ಇತ್ಯಾದಿಗಳಿಗೆ ಅನುಕೂಲ ವಾಗಲಿದೆ ಎಂದು ಹೇಳಿದರು.

ಇದೇ ವೇಳೆ ಮುಕ್ತ ವಿವಿಯು ಜಿಕೆ ಗ್ಲೋಬಲ್ ಅಕಾಡೆಮಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಅಂಧ ವಿದ್ಯಾರ್ಥಿಗಳಿಗಾಗಿ ಮುಕ್ತ ವಿವಿಯ ಸಿದ್ಧಪಾಠಗಳನ್ನು ಶ್ರವ್ಯ ಪಾಠಗಳನ್ನಾಗಿ ಪರಿವರ್ತಿಸಲು ಮೈಕಾ ಕಾಲೇಜಿನ ಜತೆ ಒಪ್ಪಂದ ಮಾಡಿಕೊಂಡಿತು.

ಕುಲಸಚಿವ ಪ್ರೊ.ಆರ್.ರಾಜಣ್ಣ, ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ನಿರ್ದೇ ಶಕಿ ಡಾ.ಎಚ್.ರಾಜೇಶ್ವರಿ, ಆಂತರಿಕ ಗುಣಮಟ್ಟ ಭರವಸೆ ಕೇಂದ್ರದ ನಿರ್ದೇಶಕ ಡಾ.ನಿರಂಜನ್ ರಾಜ್, ವಿವಿಯ ಉದ್ದಿಮೆ ಸಂಪರ್ಕ ಅಧಿಕಾರಿ ಡಾ.ಅನಂತೇಗೌಡ ಇದ್ದರು.

» ಕಂಪನಿಗಳ ಪ್ರತಿನಿಧಿಗಳೊಂದಿಗೆ ಮುಕ್ತ ವಿವಿ ಸಭೆ

ವಿಜಯವಾಣಿ ಚಿತ್ರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಮಂಗಳವಾರ ವಿವಿಧ ಉದ್ದಿಮೆಗಳೊಂದಿಗೆ ಒಪ್ಪಂದ ಮಾಡಿಕೊಂಡಿತು. ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್, ಪ್ರೊ.ಆರ್.ರಾಜಣ್ಣ, ಡಾ.ಎಚ್.ರಾಜೇಶ್ವರಿ, ಡಾ.ನಿರಂಜನ್ ರಾಜ್, ಡಾ.ಅನಂತೇಗೌಡ ಇದ್ದರು.